# ಮಾದರಿ I
## ತೃತೀಯ ಭಾಷೆ ಕನ್ನಡ

I. ಸೂಕ್ತ ಉತ್ತರ ಆರಿಸಿ ಬರೆಯಿರಿ. 1x15=15

1). 'ಅವನು' ಎಂಬುದು
ಎ). ರೂಢನಾಮ ಬಿ). ಅನ್ವರ್ಥನಾಮ ಸಿ) ಸರ್ವನಾಮ ಡಿ). ಅಂಕಿತನಾಮ,

2). 'ನಾನು' ಎಂಬುದು ಈ ಸರ್ವನಾಮ ಪದ
ಎ). ಉತ್ತಮ ಪುರುಷ ಬಿ). ದ್ವಿತೀಯ ಪುರುಷ ಸಿ).ಮಧ್ಯಮ ಪುರುಷ ಡಿ). ಪ್ರಥಮ ಪುರುಷ

3). 'ಪೇಟೆಯಲ್ಲಿ' ಈ ಪದದಲ್ಲಿರುವ ವಿಭಕ್ತಿ ಪ್ರತ್ಯಯ
ಎ). ಅಲ್ಲಿ ಬಿ) ಯಲ್ಲಿ ಸಿ). ಇ ಡಿ). ಇಲ್ಲಿ

4). ಪ್ರಜ್ಞಾವಂತ ಪದದ ಅನ್ಯ ಲಿಂಗ ರೂಪ ಯಾವುದು?
ಎ). ಪ್ರಜ್ಞಾವಾಂತೆ ಬಿ). ಪ್ರಜ್ಞಾವಂತೆ ಸಿ) ಪ್ರಾಜ್ಞವಂತ ಡಿ). ಪ್ರಾಜ್ಞೆವೆಂತ

5. 'ಜ್ಞಾನ' ಈ ಪದದ ವಿರುದ್ಧಾರ್ಥಕ ಪದ ಯಾವುದು?
ಎ).ಅಜ್ಞಾನ ಬಿ). ಸುಜ್ಞಾನ ಸಿ). ವಿಜ್ಞಾನ ಡಿ). ಮಹಾಜ್ಞಾನ

6) 'ಥವರುಮನೆ' ಪದದ ಶುದ್ಧ ರೂಪ
ಎ). ದವರುಮನೆ ಬಿ). ತವರುಮನೆ ಸಿ). ದೇವರು ಮನೆ ಡಿ). ತೋರುಮನೆ

7). 'ಅಣ್ಣಂದಿರು' ಪದದ ಏಕವಚನ ರೂಪ
ಎ). ಅಣ್ಣರು ಬಿ). ಅಣ್ಣ ಸಿ). ಅಣ್ಣಗಳು ಡಿ). ಅಣ್ಣವಂದಿರು

8). 'ನಗುವಿನ ಪರದೆ' ಇಲ್ಲಿರುವ ಅಲಂಕಾರ
ಎ). ಉಪಮಾಲಂಕಾರ ಬಿ). ದೃಷ್ಟಾಂತಾಲಂಕಾರ ಸಿ). ಶ್ಲೇಷಾಲಂಕಾರ ಡಿ). ರೂಪಕಾಲಂಕಾರ

9). 'ಕೇದಾರ ದರ್ಶನದ ಬಹುದಿನಗಳ ಬಯಕೆ ಈಡೇರಿತು' ಈ ವಾಕ್ಯದಲ್ಲಿರುವ ಕ್ರೀಯಾಪದ
ಎ). ದರ್ಶನ ಬಿ). ಕೇದಾರ ಸಿ). ಬಹುದಿನ ಡಿ). ಈಡೇರು

10) ಓ ನನ್ನ ತಾಯಿ ಇಲ್ಲಿರಬೇಕಾದ ಲೇಖನ ಚಿಹ್ನೆ
ಎ). ವಿವರಣಾತ್ಮಕ ಬಿ). ಉದ್ಧರಣ ಸಿ). ಅಲ್ಪವಿರಾಮ ಡಿ). ಪ್ರಶ್ನಾರ್ಥಕ

11). ಇವುಗಳಲ್ಲಿ ಗುಂಪಿಗೆ ಸೇರದ ಪದ ಯಾವುದು?
ಎ). ಸರಸರ ಬಿ). ಪಟಪಟ ಸಿ). ಗಬಗಬ ಡಿ). ಮಾಡು ಮಾಡು

12). 'ಅವ್ಳೆ' ಪದದ ಗ್ರಾಂಥಿಕರೂಪ ________
ಎ). ಅವಳು ಬಿ). ಅವಳೇ ಸಿ). ಅವಳಿಗೆ ಡಿ). ಅವಳ

13). 'ದೇವಾಲಯ' ಪದಕ್ಕೆ ಪ್ರಸ್ತಾರ ಹಾಕಿದಾಗ ಹೀಗಾಗುತ್ತದೆ
ಎ). – – – – ಬಿ). – – uu ಸಿ). uu – – ಡಿ). u – u–

14). 'ವಿದೂಷಕ' ಪದದ ಸಮಾನಾರ್ಥಕ ಪದ
ಎ). ಮಂತ್ರಿ ಬಿ). ನಾಟಕಗಾರ ಸಿ). ಅರಸ ಡಿ). ಹಾಸ್ಯಗಾರ

15). ಕೇಳು: ಕೇಳಿಯಾನು:: ಮಾಡು : _____
ಎ). ಮಾಡನು ಬಿ). ಮಾಡಿಯಾನು ಸಿ). ಮಾಡುವನು ಡಿ). ಮಡಿಯನು

II. ಹೊಂದಿಸಿ ಬರೆಯಿರಿ 1x5=5

| | |
|---|---|
| 16). ಹೊಸಗನ್ನಡ | ಅನುಕರಣಾವ್ಯಯ |
| 17). ಪಾಣಿಗ್ರಹಣ | ಅನ್ವರ್ಥನಾಮ |
| 18). ಕುಂಟ | ದ್ವಿರುಕ್ತಿ |
| 19). ಬರೆಬರೆದು | ಗೋಕಾಕ |
| 20). ವಿನಾಯಕ ಕೃಷ್ಣ | ಮದುವೆ |
| | ಆದೇಶ ಸಂಧಿ |

III. ಬಿಟ್ಟಸ್ಥಳ ತುಂಬಿರಿ. 1X5=5

21). ಸಹ್ಯಾದ್ರಿಯ ಮಹಾಕವಿ_______
22). ಹಿತ್ತಲ ಗಿಡ __________
23). ಬಡವರ ಸೊಸೆಗೆ ನಾಲಿಗೆ ಸಡಿಲು ಬಿಡಬಲ್ಲವರೆಲ್ಲ _________
24). ಭೂಮಿಯಿಂದ ಸಿಡಿದು ಬಂದ ಚಂದ್ರ _________ ಸುತ್ತ ಸುತ್ತುತ್ತಿರುವನು
25). 'ಭರತೇಶ ವೈಭವ' ಇದು ಒಂದು ___________ ಕಾವ್ಯ ಪ್ರಕಾರ

IV. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. ` 1X8=8

26). ಭರತನ ತಾಯಿ ಏಕೆ ಅತ್ತಳು?
27). ಸುಮೇರು ಪರ್ವತದಲ್ಲಿರುವ ಐದು ಶಿಖರಗಳು ಯಾವುವು?
28). ರಾಘಣ್ಣ ತಲೆಗೆ ಕೈಹೊತ್ತು ಕುಳಿತುಕೊಳ್ಳಲು ಕಾರಣವೇನು?
29). ಸೊಸೆಯನ್ನು ಮನೆಯತ್ತ ಸೆಳೆದ ಭಾವಗಳಾವುವು?
30). ಗಾಂಧೀಜಿ ಯಾರಿಗೆ ಭಾಗ್ಯರವಿಯಾಗಿದ್ದರು?
31). ಬೇವಿನ ಹಳ್ಳ ಎಲ್ಲಿ ತುಳುಕಾಡಿತ್ತು?
32). ಹಡಗು ಯಾರ ಕೌಶಲ್ಯಕ್ಕೆ ಕಳಸವಿಟ್ಟಂತಿದೆ?
33). ಪುರಂದರದಾಸರ ಎರಡು ಕೃತಿಗಳನ್ನು ಹೆಸರಿಸಿ.

V. ಈ ಕೆಳಗಿನ ಪ್ರಶ್ನೆಗಳಿಗೆ 2 ವಾಕ್ಯದಲ್ಲಿ ಉತ್ತರಿಸಿ. 15X2=30

34) ಚಿನ್ನದ ಕೋಲಿನ ಮಹಿಮೆ ಏನು?
35) ಭಾರತ ಮಾತೆಯ ಬಗ್ಗೆ ಭಾರತೀಯರ ಭಾವನೆಗಳೇನು?
36). ಲೇಖಕಿಗೆ ಮರಿತೇನ್‌ಸಿಂಗ್ ಆಗುವ ಆಸೆ ಯಾಕಾಯಿತು?
37). ಕಾರಂತರ ನಿಲುವು ಏನಾಗಿತ್ತು?

38). ರಾಮಚಂದ್ರರಾಯರು ಮೈಸೂರಿನಲ್ಲಿ ಸತ್ಯಾಗ್ರಹ ಮಾಡಲು ಕಾರಣವೇನು?
39). 'ಲಕ್ಷಣಿಗೆ ಅಂತ ಯಾಕೆ ಕರಿತಾರೆ' ಎಂಬ ಪ್ರಶ್ನೆಗೆ ಅಜ್ಜಿ ಹೇಳಿದ ಉತ್ತರವೇನು?
40). ಶಾಸ್ತ್ರಿಗಳ ಮನೆಯ ಅಡಿಗೆ ಮನೆ ಮತ್ತು ದೇವರ ಸಾನ್ನಿಧ್ಯ ಹೇಗಿತ್ತು?
41). ಪ್ರಾಚೀನ ಕವಿಗಳನ್ನು ಜೀವನದಿ ಪದ್ಯದಲ್ಲಿ ಯಾವ ಹೋಲಿಕೆಯೊಂದಿಗೆ ಪರಿಚಯಿಸಲಾಗಿದೆ?
42). ಕವಿ ಗಾಂಧೀಜಿಯವರನ್ನು 'ಪವಾಡಪುರುಷ' ಎಂದು ಏಕೆ ಕರೆದಿದ್ದಾರೆ?
43). 'ತೋರಿಸು ಬಾರೆ ತವರೂರ' ಎಂದು ಬಳೆಗಾರ ಹೇಳಿದ್ದು ಏಕೆ?
44). ವಚನಕಾರರ ಪ್ರಕಾರ ದನದ ಸ್ವರೂಪ ಹೇಗಿತ್ತು?
45). ಕವಿ ಪುತ್ರನು ಭಾರತಕ್ಕೆ ಹಿಂದಿರುಗಲು ತಿರ್ಮಾನಿಸಿದ್ದು ಏಕೆ?
46). ಯಾವಾಗ ಧರ್ಮವನ್ನು ಗಳಿಸುವ ಪ್ರಯತ್ನ ಮಾಡಬೇಕೆಂದು ದಾಸರು ಹೇಳಿದ್ದಾರೆ?
47). ಪೂರ್ಣಿಮಾಳ ಗಂಡನ ಮನೆ ಹೇಗಿತ್ತು?
48). ಧ್ಯಾನದ ಮಹತ್ವವೇನು?

VI. ಈ ಕೆಳಗಿನ ಹೇಳಿಕೆಗಳನ್ನು ಸಂದರ್ಭಸಹಿತ ವಿವರಿಸಿ. 3X4=12

49). "ಅವರು ಪಾಠ ಹೇಳುತ್ತಿದ್ದ ಮನೆಯಿಂದ ಹಣ ಕದಿಯುತ್ತಿದ್ದರು"
50). 'ಇದು ಬ್ರಹ್ಮಾಂಡ – ನೂರು ಭಾಷೆಗಳ ನವಖಂಡ'
51). "ನಿನ್ನ ತವರೂರ ನಾನೇನು ಬಲ್ಲೆನು?"
52). 'ಮಳೆ ಒಂದು ಖಾಲಿ ಚೆಕ್ಕಿನ ಹಾಗೆ'

VII. ಪದ್ಯಭಾಗ ಪೂರ್ಣಗೊಳಿಸಿ ' 3

53). ಕಾಲನ ದೂತರು __________

____________________

________________ ಧರ್ಮವ ಗಳಿಸಿರೋ

VIII. ಈ ಕಳಗಿನ ಪ್ರಶ್ನೆಗಳಿಗೆ 6 ವಾಕ್ಯದಲ್ಲಿ ಉತ್ತರಿಸಿ. 2X4=8

54). ತೆನಾಲಿ ರಾಮಕೃಷ್ಣ ಮತ್ತು ಗೌರಿ ಈ ಇಬ್ಬರಲ್ಲಿ ಮೊದಲು ಸತ್ತವರು ಯಾರೆಂದು ತಿಳಿಯಲು ಮಂತ್ರಿಯು ಮಾಡಿದ ಉಪಾಯವೇನು?
55). ಲೇಖಕರು ಲಾಲ್‌ಬಾಗಿನ ಚೆಲುವನ್ನು ಹೇಗೆ ವರ್ಣಿದ್ದಾರೆ?

IX. ಈ ಕೆಳಗಿನ ಪ್ರಶ್ನೆಗಳಿಗೆ 6 ವಾಕ್ಯದಲ್ಲಿ ಉತ್ತರಿಸಿ. 1x4=4

56). 'ಯುಗಾದಿ ಬರುವುದು ನಮಗೆಂದೇ?' ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ

X. 57). ನೀನು 'ಮಹೇಶ'/ಮಾಲತಿ ಹತ್ತನೇ ತರಗತಿ, ಸರಕಾರಿ ಪ್ರೌಢಶಾಲೆ, ಧಾರವಾಡ ಎಂದು ಭಾವಿಸಿ. ನಿಮ್ಮ ಶಾಲಾ ಶೈಕ್ಷಣಿಕ ಪ್ರವಾಸದಲ್ಲಿ ಭಾಗವಹಿಸಲು 500 ರೂಪಾಯಿಗಳನ್ನು ಕಳುಹಿಸಿ ಕೊಡುವಂತೆ ನಿಮ್ಮ ತಂದೆಗೆ ಒಂದು ಪತ್ರ ಬರೆ.

ಅಥವಾ 1x5=5

ನೀವು ಬೆಂಗಳೂರಿನ ಸದಾಶಿವ ನಗರ ಬಡಾವಣೆಯ ನಿವಾಸಿ ಮೋಹನ/ರಮಾ ಎಂದು ಭಾವಿಸಿ ನಿಮ್ಮ ಬಡಾವಣೆಯಲ್ಲಿ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಪ್ರಾರಂಭಿಸುವಂತೆ ಮಹಾನಗರಪಾಲಿಕೆಯ ಆಯುಕ್ತರಿಗೊಂದು ಮನವಿ ಪತ್ರ ಬರೆಯಿರಿ.

XI 58). ಒಂದನ್ನು ಕುರಿತು ಪ್ರಬಂಧ ಬರೆಯಿರಿ. 1x5=5

1. ಕ್ರೀಡೆಗಳು 2. ಅರಣ್ಯ ಸಂರಕ್ಷಣೆ 3. ಸುದ್ದಿ ಮಾಧ್ಯಮಗಳು ಮತ್ತು ಪರಿಣಾಮ.

# ಮಾದರಿ II
# ತೃತೀಯ ಭಾಷೆ ಕನ್ನಡ

I. ಸೂಕ್ತ ಉತ್ತರ ಆರಿಸಿ ಬರೆಯಿರಿ. 1x15=15

1). ವರ್ಗೀಯ ವ್ಯಂಜನದ ಪ್ರತಿ ವರ್ಗದ ಐದನೆಯ ಅಕ್ಷರವನ್ನು ಹೀಗೆಂದು ಕರೆಯುತ್ತಾರೆ.
ಎ). ಅಲ್ಪಪ್ರಾಣ ಬಿ). ಮಹಾಪ್ರಾಣ ಸಿ). ಅನುನಾಸಿಕ ಡಿ). ಯೋಗವಾಹ

2). 'ಕುಮಾರ' ಶಬ್ದದ ತದ್ಭವ
ಎ). ಕುಮರ ಬಿ). ಕುವರ ಸಿ). ಕುವಾರ ಡಿ). ಕು:ಹರ

3). "ಆ ಊರಿನಲ್ಲಿ ಎರಡು ಸರೋವರಗಳಿದ್ದವು".– ಈ ವಾಕ್ಯದಲ್ಲಿ ಸಂಖ್ಯಾವಾಚಕ ಯಾವುದು?
ಎ). ಆ ಬಿ). ಊರು ಸಿ). ಎರಡು ಡಿ). ಸರೋವರ

4). ಕೆಲವು, ಅವರು, ದಕ್ಷಿಣ, ಎಲ್ಲಿ ____ ಇವುಗಳಲ್ಲಿ ಸರ್ವನಾಮ ಪದ
ಎ). ಕೆಲವು ಬಿ). ಅವರು ಸಿ). ದಕ್ಷಿಣ ಡಿ). ಎಲ್ಲಿ

5). ಕ್ರಿಯಾ ಪದದ ಮೂಲರೂಪಕ್ಕೆ ಹೀಗೆಂದು ಕರೆಯುತ್ತಾರೆ.
ಎ). ಧಾತು ಬಿ). ಅವ್ಯಯ ಸಿ). ಸಂಧಿ ಡಿ). ಸಮಾಸ

6). 'ಕವಿ' ಪದವನ್ನು ಲಿಂಗ ಬದಲಿಸಿ ಬರೆದಾಗ ಹೀಗಾಗುತ್ತದೆ.
ಎ). ಕವಯತ್ರಿ ಬಿ). ಕವಿಯತ್ರಿ ಸಿ). ಕವಿತ್ರಿ ಡಿ). ಕವಿಯಿತ್ರಿ

7). 'ಹೋಗು' ಈ ಪದವು ಭವಿಷ್ಯತ್ ಕಾಲದಲ್ಲಿ ಹೀಗಾಗುತ್ತದೆ.
ಎ). ಹೋಗುತ್ತಾನೆ ಬಿ). ಹೋಗುವನು ಸಿ). ಹೋದನು ಡಿ). ಹೋಗುತ್ತಿದ್ದಾನೆ.

8). ಈ ಶಬ್ದ ದ್ವಿರುಕ್ತಿಯಾಗಿದೆ.
ಎ). ಗಡಗಡ ಬಿ). ಥಳಥಳ ಸಿ). ಮೊದಮೊದಲು ಡಿ). ತಟತಟ

9). ಸೌಂದರ್ಯೋಪಾಸಕ, ರಥೋತ್ಸವ, ಸೌಂದರ್ಯಾಮೃತ, ನವೋದಯ ಇವುಗಳಲ್ಲಿ ಗುಂಪಿಗೆ ಸೇರದ ಪದ
ಎ). ಸೌಂದರ್ಯೋಪಾಸಕ ಬಿ). ರಥೋತ್ಸವ ಸಿ). ಸೌಂದರ್ಯಾಮೃತ ಡಿ) ನವೋದಯ

10). ಧರ್ಮ ಶಬ್ದದ ವಿರುದ್ಧಾರ್ಥಕ ಪದ
ಎ). ಸುಧರ್ಮ ಬಿ). ಅಧರ್ಮ ಸಿ). ನಿಧರ್ಮ ಡಿ). ವಿಧರ್ಮ

11). ಕಂದ ಪದ್ಯ ಈ ಗಣಕ್ಕೆ ಸೇರುತ್ತದೆ.
ಎ). ಅಕ್ಷರಗಣ ಬಿ). ಅಂಶಗಣ ಸಿ) ವರ್ಣಗಣ ಡಿ). ಮಾತ್ರಾಗಣ

12). 'ಹಕ್ಕಿ ಹಣ್ಣನ್ನು ತಿನ್ನುತ್ತದೆ' ಎನ್ನುವುದು ________
ಎ). ಸಾಮಾನ್ಯ ವಾಕ್ಯ ಬಿ). ಮಿಶ್ರ ವಾಕ್ಯ ಸಿ). ಸಂಯೋಜಿತ ವಾಕ್ಯ ಡಿ). ಸಂಯುಕ್ತ ವಾಕ್ಯ

13). ನಿಧಾನ : ಮೆಲ್ಲನೆ :: ನಿಧನ : ________
ಎ). ಸಮೀಪ ಬಿ) ಸಾವು ಸಿ). ಸಂಪತ್ತು ಡಿ). ಚಿನ್ನ

14). 'ಇಟ್ಟಣಿಸು' ಪದದ ಅರ್ಥ ________
ಎ). ಇಟ್ಟಿಗೆ ಇಡು ಬಿ). ಲತ್ತಿಸು ಸಿ). ಗುರಿಸಾಗು ಡಿ). ದಾರಿ ಬಿಡು

15). ಪರ್ವತ, ಕುಂಡ, ಕ್ಯೂ, ಸಮಾಧಿ – ಇವುಗಳಲ್ಲಿ ಅನ್ಯದೇಶೀಯ ಪದ
ಎ). ಪರ್ವತ ಬಿ). ಕುಂಡ ಸಿ) ಕ್ಯೂ ಡಿ). ಸಮಾಧಿ

II. ಹೊಂದಿಸಿ ಬರೆಯಿರಿ 1x5=5

| | |
|---|---|
| 16). ಮತ್ತೊಮ್ಮೆ | ಉದ್ಗಾರವಾಚಕ |
| 17). ನೀರುನಿಡಿ | ಷಷ್ಠಿ ವಿಭಕ್ತಿ |
| 18). ಅಯ್ಯೋ | ಲೋಪಸಂಧಿ |
| 19). ಮನೆಯ | ಮಕ್ಕಳು |
| 20). ಮಗು | ಜೋಡಿಪದ |
| | ಮಗುಗಳು |

III. ಬಿಟ್ಟ ಸ್ಥಳ ಭರ್ತಿಮಾಡಿ 1x5=5

21). ________ ರು ಕರ್ನಾಟಕದ ಹಾಗೂ ಭರತ ಖಂಡದ ಪ್ರಾಯೋಗಿಕ ವಿಜ್ಞಾನದ ಇತಿಹಾಸದಲ್ಲಿ ಅಜರಾಮರರಾಗಿದ್ದಾರೆ.
22). ಕವಿಯ ಮಗ ________ ವರ್ಷಗಳ ಹಿಂದೆ ತೀರಿ ಹೋಗಿದ್ದನು
23). ದೂರದ ಬೆಟ್ಟ ಕಣ್ಣಿಗೆ ________
24). 'ಮಾನವ ಜನ್ಮ ದೊಡ್ಡದು' ಎಂದು ಹೇಳಿದವರು ________
25). ಉಳಿದರೆ ಕಾಡು ; ಅಳಿಯದು ________

IV. ಒಂದು ವಾಕ್ಯದಲ್ಲಿ ಉತ್ತರಿಸಿ 1x8=8

26). ವಾಸ್ತು ಎಂದರೇನು?
27). 'ಅಂಬಿಕಾತನಯದತ್ತ' ಯಾರ ಕಾವ್ಯನಾಮ?
28). ರಾಮಕೃಷ್ಣನ ಹೆಂಡತಿಯು ತನ್ನ ಗಂಡನು ಎಲ್ಲಿಗೆ ಹೋದನೆಂದು ರಾಣಿಗೆ ಹೇಳಿದಳು?
29). ಯಾರ ವಿಚಾರಸರಣಿ ಲೇಖಕಿಯ ಮನಸ್ಸಿನಲ್ಲಿ ಗೊಂದಲ ಎಬ್ಬಿಸಿತು?
30). ಯಾರ ಬಳಿಯಲ್ಲಿ ಕಾರಂತರು ಶಿಷ್ಯ ವೃತ್ತಿ ಗಿಟ್ಟಿಸಿದರು?
31). ಹಡಗಿನ ಪ್ರಯಾಣದಲ್ಲಿ ಏನನ್ನು ಕಟ್ಟಬಹುದು?
32). ಏಕೋಭಾವದಿಂದ ಯಾರನ್ನು ಭಜಿಸಬೇಕು?
33). 'ಗಾಂಧೀ' ಪದ್ಯದಲ್ಲಿ ಬಳಸಿರುವ 'ಹುಡಿಯ ಹುಳುಗಳು' ಯಾರು?

V. ಈ ಕೆಳಗಿನ ಪ್ರಶ್ನೆಗಳಿಗೆ 2 ವಾಕ್ಯಗಳಲ್ಲಿ ಉತ್ತರಿಸಿ 15x2=30

34). ಸೊಸೆ ಸಾಯುವ ಮೊದಲು ತನ್ನ ಕುಟುಂಬದವರ ಬಗ್ಗೆ ಏನೆಂದು ಯೋಚಿಸುತ್ತಾಳೆ?
35). ಲೇಖಕಿ ಲಕ್ಷ್ಮಣಿಗೆಯ ಜನ್ಮ ರಹಸ್ಯದ ಬಗ್ಗೆ ವಿಚಾರಮಾಡಿ ಬಳಿಕ ಸಮಾಧಾನ ಪಟ್ಟುಕೊಂಡದ್ದು ಏಕೆ?
36). ಭರತಕುಮಾರ ಚಿನ್ನದ ಕೋಲಿನ ಮಹಿಮೆಯಿಂದ ತಾಯಿಯನ್ನು ಹೇಗೆ ಹುಡುಕಿದ?
37). ಭರತಕುಮಾರನ ಕನಸಿನಲ್ಲಿ ತಾಯಿ ಬಂದು ಏನೆಂದು ಹೇಳಿದಳು?
38). ಗೋಕುಂಡದ ವೈಶಿಷ್ಟ್ಯ ಏನು?
39). ಮಕ್ಕಳ ರಂಗಭೂಮಿಗೆ ಕಾರಂತರ ಕೊಡುಗೆ ಏನು?
40). ಗಾಂಧಿಯನ್ನು 'ಸರ್ವೋದಯ ಸೂತ್ರಧಾರ' ಎಂದು ಏಕೆ ಕರೆಯಲಾಗಿದೆ?
41). ಪುರಂದರದಾಸರು ಮಾನವ ಜನ್ಮದ ಬಗ್ಗೆ ಏನು ಹೇಳುತ್ತಾರೆ?
42). ಧ್ಯಾನವೆಂಬ ಅಗ್ನಿಯು ಏನನ್ನು ದಹಿಸಿ ನಿವಾರಿಸುವುದು?
43). ಆಧುನಿಕ ಕವಿಗಳನ್ನು ಪ್ರಕೃತಿಯೊಂದಿಗೆ ಹೇಗೆ ಸಮ್ಮಿಲನ ಗೊಳಿಸಲಾಗಿದೆ?

44). ಯಾವ ದಾರಿಯಲ್ಲಿ ಹೋಗುವಂತೆ ಬಾಲೆ ಬಳೆಗಾರನಿಗೆ ತಿಳಿಸಿದಳು?
45). ಕವಿಯನ್ನು ನೋಡಿದ ಹಿರಿಯರಲ್ಲಾದ ಬದಲಾವಣೆ ಏನು?
46). ರಾಯರನ್ನು 'ಛೋಟಾ ಗಾಂಧಿ' ಎಂದು ಏಕೆ ಕರೆದಿದ್ದಾರೆ?
47). ಪೂರ್ಣಿಮಾಳು ಸನ್ಯಾಸಿಯ ಬಳಿ ಹೋಗಲು ಕಾರಣವೇನು?
48). ನಮ್ಮ ದೇಹವು ಅಚ್ಚು ಮುರಿದ ಹಾಳು ಬಂಡಿಯಂತಾಗುವುದು ಯಾವಾಗ?

VI. ಈ ಕೆಳಗಿನ ಹೇಳಿಕೆಗಳನ್ನು ಸಂದರ್ಭ ಸಹಿತ ವಿವರಿಸಿ. 4x2=8
49). ಕೊಳವೆಬಾವಿ ಕೊರೆಯುವುದರಲ್ಲಿ ಸಾಮಾಜಿಕ ನ್ಯಾಯವಿಲ್ಲ.
50). ನೆರವೇ ಗೆಲುವು ಔಚಿತ್ಯವೇ ಚೆಲುವು.
51). ಬಾಳೆ ಬಲಕ್ಕೆ ಬಿಡು, ಸೀಬೆ ಎಡಕ್ಕೆ ಬಿಡು.
52). ಕಾರಂತರಿಗೆ ಬಡತನವಿದ್ದರೂ ಸಾಂಸ್ಕೃತಿಕವಾಗಿ ಬಡತನವಿರಲಿಲ್ಲ.

VII. ಪದ್ಯಭಾಗ ಪೂರ್ತಿಗೊಳಿಸಿ 3
53). ಪಂಪ ಮಹಾಚಲ -----------
------------------------
------------------ ಬಯಲು

VIII. ಈ ಕಳಗಿನ ಪ್ರಶ್ನೆಗಳಿಗೆ 6 ವಾಕ್ಯದಲ್ಲಿ ಉತ್ತರಿಸಿ. 2x4=8
54). 'ಮತ್ತೆ ಬದುಕಿರಿ' ನಾಟಕದಲ್ಲಿ ಹಾಸ್ಯದ ಜೊತೆ ಬರಗಾಲದ ಭೀಕರತೆ ಹೇಗೆ ವ್ಯಕ್ತವಾಗಿದೆ?
55). ಲಾಲ್‌ಬಾಗಿನಲ್ಲಿರುವ ಸ್ಮಾರಕಗಳು ಯಾವುವು?

IX. ಈ ಕೆಳಗಿನ ಪ್ರಶ್ನೆಗಳಿಗೆ 6 ವಾಕ್ಯಗಳಲ್ಲಿ ಉತ್ತರಿಸಿ. 1x4=4
56). 'ಯುಗಾದಿ ಬರುವುದು ನಮಗೆಂದೆ? ಕವಿತೆಯ ಆಶಯವೇನು?

X.57).ನೀವು ಪ್ರಜ್ವಲ್/ ಪ್ರಥ್ವಿ, ಹತ್ತನೇ ತರಗತಿ ಸರಸ್ವತಿ ವಿದ್ಯಾಲಯ, ಉಡುಪಿ ಎಂದು ಭಾವಿಸಿ ಅನಾರೋಗ್ಯದ ಕಾರಣ ರಜೆ ಕೋರಿ ನಿಮ್ಮ ಶಾಲಾ ಮುಖ್ಯೋಪಾಧ್ಯಾಯರಿಗೆ ಒಂದು ರಜೆ ಅರ್ಜಿ ಬರೆಯಿರಿ,
ಅಥವಾ 1x5=5
ನೀವು ಮೈಸೂರಿನ ವಸಂತನಗರ ಬಡಾವಣೆಯ ನಿವಾಸಿ ರಂಜಿತ್ ಎಂದು ಭಾವಿಸಿ ನಿಮ್ಮ ಬಡಾವಣೆಯಲ್ಲಿ ಬೀದಿದೀಪ ಅಳವಡಿಸುವಂತೆ ನಗರ ಪಾಲಿಕೆಯ ಅಧ್ಯಕ್ಷರಿಗೊಂದು ಮನವಿ ಪತ್ರ ಬರೆಯಿರಿ.

XI.58)ಯಾವುದಾದರೂ ಒಂದರ ಕುರಿತು ಪ್ರಬಂಧ ಬರೆಯಿರಿ. 1x5=5
1. ಜಲಸಂರಕ್ಷಣೆಯ ಅಗತ್ಯತೆ
2. ವರದಕ್ಷಿಣೆ – ಒಂದು ಸಾಮಾಜಿಕ ಸಮಸ್ಯೆ
3. ಪರಿಸರ ಮಾಲಿನ್ಯದ ಪರಿಣಾಮಗಳು.

***************